ಅದೇ ಸಮಯದಲ್ಲಿ ರಸ್ತೆಯ ತಿರುವಿನಿಂದ ಸೀರೆಯುಟ್ಟಿದ್ದ ಒಬ್ಬ ಹೆಂಗಸು ನನ್ನ ಬೈಕನ್ನು ಹಾದು ಬಂದಳು. ಕೆಂಪು ಬಣ್ಣದ ನೈಲಾನ್ ಸೀರೆ, ಮುಡಿಯಲ್ಲಿ ಬಾಡಿಹೋಗಿದ್ದ ಮಲ್ಲಿಗೆಯ ಮಾಲೆ, ಬಗಲಿಗೆ ನೇತು ಹಾಕಿಕೊಂಡಿದ್ದ ಹಳೆಯದಾಗಿ ಹೋಗಿದ್ದ ಕಂದು ಬಣ್ಣದ ವ್ಯಾನಿಟಿ ಬ್ಯಾಗು ಸೋಡಿಯಂ ದೀಪದ ಬೆಳಕಲ್ಲಿ ನಿಚ್ಚಳವಾಗಿ ಕಾಣಿಸಿ ಅವಳೊಬ್ಬಳು ಬೆಲೆವೆಣ್ಣು ಎಂಬುದು ದೃಢವಾಯಿತು. ನಡೆದು ಬಂದವಳು ನನ್ನ ಬಳಿಯೇ ಬಂದು ನಿಂತದ್ದು ಕಂಡು ನನಗೆ ತುಸು ಹೆದರಿಕೆಯಾಗಿ ಮುಖ ಅತ್ತ ತಿರುಗಿಸಿ ನಿಂತು ಸಿಗರೇಟು ಸೇದತೊಡಗಿದೆ.

‘ಹೋಯ್ ಬರ್ತೀಯಾ ರಾಜಾ...’ ಎಂದು ಅವಳು ನುಡಿದದ್ದು ಕಿವಿಗಳಿಗೆ ಬಿದ್ದು ನನ್ನ ಜಂಘಾಬಲವೇ ಉಡುಗಿಹೋಯಿತು. ಇನ್ನು ಇಲ್ಲಿಯೇ ನಿಂತರೆ ಗೂಡಂಗಡಿಯ ಬಳಿ ನೋಡಿದ ಪೊಲೀಸ್ ಇನ್‌ಸ್ಪೆಕ್ಟರ್ ಬಂದು ಕೇಸು ಜಡಿದು ಜೈಲಿಗೆ ಕಳಿಸಿದರೆ ಎಂದು ಅತೀವ ಭೀತಿಯುಂಟಾಗಿ ಸೇದುತ್ತಿದ್ದ ಸಿಗರೇಟು ಬಿಸಾಕಿ ಬೈಕಿನತ್ತ ಸರಸರ ನಡೆದೆ. ಅವಳು ಹಿಂದೆಯೇ ಬಂದಳು.

‘ಥೂ ಬಡ್ಡಿಮಗನೆ, ನೋಡೋದಿಕ್ಕೆ ಇಷ್ಟು ದಪ್ಪ, ಇಷ್ಟು ಉದ್ದ ಇದೀಯಾ... ಗಂಡಸಲ್ವಾ ನೀನು...’ ಎಂದು ಕಿರುಚಿದಳು.

ಅವಳ ದನಿಯಲ್ಲಿ ಎಂತಹುದೋ ಹತಾಶೆಯಿದ್ದುದು ನನ್ನ ಗಮನಕ್ಕೆ ಬಂದಿತು. ತುಂಬಾ ಸಿಟ್ಟು ಬಂದಿತಾದರೂ ಅವಳ ಜೊತೆ ಜಗಳಕ್ಕೆ ನಿಂತರೆ ಕೆಲಸ ಕೆಡುತ್ತದೆ ಎಂದು ಬೈಕು ಹತ್ತಿ ಕುಳಿತು ಸ್ಟಾರ್ಟ್ ಮಾಡಿ ಹೊರಟೆ.

‘ಹೇ ನಿಂತ್ಕಳೋ... ಬೆಳಿಗ್ಗೆಯಿಂದ ಏನೂ ತಿಂದಿಲ್ಲಾ... ಯಾರೂ ಗಿರಾಕಿ ಸಿಕ್ಕಿಲ್ಲ... ಹೊಟ್ಟೆ ಹಸಿವು ತಾಳೊಕಾಗ್ತಿಲ್ಲ...’ ಎಂದು ಕೂಗಿದಳು.

ಅವಳ ಮಾತುಗಳನ್ನು ಕೇಳಿ ಎಲ್ಲಾ ನಾಟಕ... ಮಾಡುವುದೇ ಹಲ್ಕಾ ಕೆಲ್ಸ... ಇದರ ಜೊತೆಗೆ ಸುಳ್ಳು ಬೇರೆ ಎನಿಸಿತಾದರೂ ಯಾಕೋ ಏನೋ ಮುಂದೆ ಹೋಗಲು ಮನಸ್ಸಾಗದೆ ಬೀದಿ ದೀಪದ ಬಳಿ ಹೋಗಿ ಬೈಕು ನಿಲ್ಲಿಸಿದೆ. ಅವಳು ಸರಸರನೆ ನಡೆದು ಮುಂದೆ ಬಂದು ಬೈಕಿನ ಹ್ಯಾಂಡಲ್ ಹಿಡಿದುಕೊಂಡು ದೀಪದ ಬೆಳಕಿನಲ್ಲಿ ನನ್ನ ಹತ್ತಿರವೇ ನಿಂತಳು. ಅವಳನ್ನೊಮ್ಮೆ ಹಾಗೇ ದಿಟ್ಟಿಸಿದೆ.

ಕಪ್ಪಗಿನ ತುಸು ಧಡೂತಿ ದೇಹ. ಮೊಂಡ ಮೂಗು, ದುಂಡಗಿದ್ದ ಮುಖ ಮತ್ತು ಕೈಗಳಲ್ಲಿ ಅಲ್ಲಲ್ಲಿ ಗೀರಿದಂತಹ ಕಲೆಗಳು. ಮಧ್ಯಮ ಎತ್ತರದ, ಮೂವತ್ತರ ಆಸುಪಾಸಿನ ವಯಸ್ಸಿನ ಹೆಣ್ಣು ಇರಬಹುದು ಎನಿಸಿತು. ಹತ್ತಿರ ನಿಂತಿದ್ದ ಅವಳ ದೇಹದಿಂದ ಎಂತಹುದೋ ಕಮಟು ವಾಸನೆ ಮೂಗಿಗೆ ಬಡಿದು ಹೊಟ್ಟೆಯಲ್ಲೆಲ್ಲಾ ಕಲಸಿದಂತಾಯಿತು.

‘ಸುಳ್ಳು ಹೇಳ್ತಾ ಇಲ್ಲಾ ರಾಜಾ... ಹೊಟ್ಟೆ ತುಂಬಾ ಹಸೀತಾ ಇದೆ. ಇದ್ದ ದುಡ್ಡಲ್ಲಿ ಈ ಮಲ್ಲಿಗೆ ಹೂವು ಮತ್ತೆ ಈ ಪಾಕೀಟು ತಗಂಡೆ...’ ಎಂದು ವ್ಯಾನಿಟಿ ಬ್ಯಾಗಿನೊಳಗೆ ಕೈ ಹಾಕಿ ಕಾಂಡೋಮಿನ ಒಂದು ಪ್ಯಾಕೆಟ್ ತೆಗೆದು ತೋರಿಸಿದಳು. ‘ಕೈಯ್ಯಲ್ಲಿ ಒಂದು ನಯಾ ಪೈಸೆ ಇಲ್ಲಾ...’ ಎಂದು ವ್ಯಾನಿಟಿ ಬ್ಯಾಗಿನ ಒಳಗಿದ್ದ ಹಳೆಯ ಮೊಬೈಲ್ ಫೋನು, ಬಾಚಣಿಗೆ, ಪೌಡರ್ ಡಬ್ಬಿಗಳನ್ನು ಕೈಗೆತ್ತಿಕೊಂಡು ಬ್ಯಾಗನ್ನು ಕೊಡವಿ ತೋರಿಸಿದಳು. ನನ್ನ ಮನಸ್ಸಿಗೆ ಪಿಚ್ಚೆನಿಸಿತು.

‘ಎಷ್ಟಾದ್ರೂ ದುಡ್ಡು ಕೊಡು... ಅಷ್ಟೇ ಸಾಕು... ನಡೀ ರಾಜಾ ಇಲ್ಲೇ ಎಲ್ಲಾದ್ರೂ ಮರೆ ಇರೋ ಖಾಲಿ ಜಾಗಕ್ಕೆ ಹೋಗೋಣ...’ ಎಂದು ಕಿಸಕ್ಕನೆ ನಕ್ಕು ನನ್ನ ಕೆನ್ನೆ ಹಿಂಡಿದಳು. ತಕ್ಷಣವೇ